# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 829/2017 ಸಿಡಬ್ಲೂ : 5 ಪಿಡಬ್ಲೂಃ 3

ಪ್ರಮಾಣವಚನ ಬೋಧಿಸಲಾಯಿತು ದಿಃ 28-01-2026

ಹೆಸರು : ನಾಗಪ್ಪ

ತಂದೆ ಹೆಸರು : ಮಲ್ಲಪ್ಪ

ವಯಸ್ಸು : 70 ವರ್ಷ

ಉದ್ಯೋಗ : ನಿವೃತ್ತ ನೌಕರರು

ವಾಸಸ್ಥಳ : ಸೇಡಂ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸನ್ 2011 ರಿಂದ 2012 ವರೆಗೂ ಸೇಡಂ ವಲಯದ ಪ್ರಭಾರಿ ಅಬಕಾರಿ ಉಪನೀರೀಕ್ಷಕರು ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಅವಧಿಯಲ್ಲಿ ನಾನು ದಿಃ17-04-2012 ರಂದು ನಾನು ಕಛೇರಿಯಲ್ಲಿ ಇದ್ದಾಗ ಸೇಡಂ ನಗರದ ಬಸವ ನಗರಲ್ಲಿ ಕಲಬೆರಕೆ ಸೇಂದಿಯನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಬಾತಮಿ ಬಂದಿತ್ತು. ಆಗ ನಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ಮಧ್ಯಾಹ್ನ 01-00 ಗಂಟೆಗೆ ಸರ್ಕಾರಿ ವಾಹನ ಸಂಖ್ಯೆ ಕೆ ಎ 32 ಜಿ 477 ನೇದ್ದರು ಮುಖಾಂತರ ಹೊರಟು ಬಾತಮಿ ಬಂದ ಸ್ಥಳಕ್ಕೆ 01-30 ಗಂಟೆಗೆ ತಲುಪಿದ್ದೆವು. ಘಟನಾ ಸ್ಥಳಕ್ಕೆ ಹೋಗಿ ಶೋಧನಾ ಪತ್ರವನ್ನು ತಯಾರಿಸಿ ಮನೆಯನ್ನು ಶೋದನೆ ಮಾಡಲಾಗಿ ಮನೆಯಲ್ಲಿ ಒಬ್ಬ ಹೆಣ್ಣು ಮಗಳು ಮತ್ತು ಒಬ್ಬ ಗಂಡು ಮಗ ಇದ್ದರು. ಮನೆಯನ್ನು ಶೋದನೆ ಮಾಡಲಾಗಿ ಅದರಲ್ಲಿ ಒಂದು ಲೀಟರು ಅಳತೆಉಳ್ಳ 100 ಸೇಂದಿ ಪಾಕೇಟುಗಳು ದೋರೆಯಿತು. ಅದರಲ್ಲಿ 1 ಲೀ ಸೇಂದಿಯನ್ನು ರಾಸಾಯನಿಕ ವಿಶ್ಲೇಷಣಾ ಕುರಿತು ಮಾದರಿಯನ್ನು ತೆಗೆಯಲಾಯಿತು. ಆಗ ಸದರಿ ಗಂಡು ಮಗನ ಹೆಸರನ್ನು ಕೇಳಲಾಗಿ ಆತನ ಹೆಸರು ನಾಗಪ್ಪ ತಂದೆ ಹುನೇನಪ್ಪ ಮತ್ತು ಹೆಣ್ಣು ಮಗಳ ಹೆಸರು ಸುಭದ್ರಮ್ಮ ಗಂಡ ಹುಸೇನಪ್ಪ ಎಂದು ತಿಳಿಸಿದರು. ಆಗ ಗುನ್ನೆ ಸ್ಥಳದಲ್ಲಿಯೇ ಕುಳಿತುಕೊಂಡು 01-30 ರಿಂದ 02-30 ವರೆಗೆ ಪಂಚನಾಮೆಯನ್ನು ಜರುರಿಸಿದೆವು. ಸಾಕ್ಷಿಯು ಸದರಿ ಶೋದನಾ ಪತ್ರವನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿ ಪಿ 4 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಮಾದರಿ ಸಹಿ ಮತ್ತು ಸೀಲನ್ನು ನಿ ಪಿ 5 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು. ನಂತರ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ ಸಾ 8 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಅದೇ ರೀತಿ ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 6 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಖಾಲಿ ಬಾಟಲಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಬಿ ಟಿ ವಕೀಲರಿಂದ ಃ

ಈ ಅವಧಿಯಲ್ಲಿ ನಾನು ದಿಃ17-04-2012 ರಂದು ನಾನು ಕಛೇರಿಯಲ್ಲಿ ಇದ್ದಾಗ ಸೇಡಂ ನಗರದ ಬಸವ ನಗರಲ್ಲಿ ಕಲಬೆರಕೆ ಸೇಂದಿಯನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಬಾತಮಿ ಬಂದಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ಮಧ್ಯಾಹ್ನ 01-00 ಗಂಟೆಗೆ ಸರ್ಕಾರಿ ವಾಹನ ಸಂಖ್ಯೆ ಕೆ ಎ 32 ಜಿ 477 ನೇದ್ದರು ಮುಖಾಂತರ ಹೊರಟು ಬಾತಮಿ ಬಂದ ಸ್ಥಳಕ್ಕೆ 01-30 ಗಂಟೆಗೆ ತಲುಪಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಘಟನಾ ಸ್ಥಳಕ್ಕೆ ಹೋಗಿ ಶೋಧನಾ ಪತ್ರವನ್ನು ತಯಾರಿಸಿ ಮನೆಯನ್ನು ಶೋದನೆ ಮಾಡಲಾಗಿ ಮನೆಯಲ್ಲಿ ಒಬ್ಬ ಹೆಣ್ಣು ಮಗಳು ಮತ್ತು ಒಬ್ಬ ಗಂಡು ಮಗ ಇದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಮನೆಯನ್ನು ಶೋದನೆ ಮಾಡಲಾಗಿ ಅದರಲ್ಲಿ ಒಂದು ಲೀಟರು ಅಳತೆಉಳ್ಳ 100 ಸೇಂದಿ ಪಾಕೇಟುಗಳು ದೊರೆಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದರಲ್ಲಿ 1 ಲೀ ಸೇಂದಿಯನ್ನು ರಾಸಾಯನಿಕ ವಿಶ್ಲೇಷಣಾ ಕುರಿತು ಮಾದರಿಯನ್ನು ತೆಗೆಯಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಸದರಿ ಗಂಡು ಮಗನ ಹೆಸರನ್ನು ಕೇಳಲಾಗಿ ಆತನ ಹೆಸರು ನಾಗಪ್ಪ ತಂದೆ ಹುನೇನಪ್ಪ ಮತ್ತು ಹೆಣ್ಣು ಮಗಳ ಹೆಸರು ಸುಭದ್ರಮ್ಮ ಗಂಡ ಹುಸೇನಪ್ಪ ಎಂದು ತಿಳಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಗುನ್ಹೆ ಸ್ಥಳದಲ್ಲಿಯೇ ಕುಳಿತುಕೊಂಡು 01-30 ರಿಂದ 02-30 ವರೆಗೆ ಪಂಚನಾಮೆಯನ್ನು ಜರುರಿಸಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿಗೂ ಮು ಮಾ ಗೂ ಯವುದೇ ಸಂಬಂದ ಇಲ್ಲ. ನಮ್ಮ ಇಲಾಖೆಯ ಅಂಕಿ ಸಂಖ್ಯೆ ಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿಕೊಡಯಿ ಸುಳ್ಳು ಸಾಕ್ಷಿ ನುಡಿಯುತಿತದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ.

**ಪ್ರ. ದ. ನ್ಯಾ ದಂ. ಸೇಡಂ.**